**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>**

<u>ಪಿ.ಸಿ.ಆರ್ ನಂ. 3380/2025</u> <u>ಸಿಡಬ್ಲ್ಯು</u> - 1

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಜಿತ ಗೋವಿಂದರಾಜನ್ |
| ತಂದೆಯ ಹೆಸರು | : | ಗೋವಿಂದರಾಜನ್ |
| ವಯಸ್ಸು | : | 38 ವರ್ಷ |
| ವೃತ್ತಿ | : | ವೈದ್ಯಾಧಿಕಾರಿ |
| ವಾಸ | : | ಇಂದಿರಾನಗರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 26.06.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ</u>** :

2015ನೇ ಇಸವಿಯಿಂದ ನಾನು ರುಷಾಲಿ ಫರ್ಟಿಲಿಟಿ ಅಂಡ್ ಸರ್ಜರಿ ಆಸ್ಪತ್ರೆ, ಹಲಸೂರಿನಲ್ಲಿ ಗೈನೊಕಾಲಾಜಿಸ್ಟ್ ಮತ್ತು ಫರ್ಟಿಲಿಟಿ ಸ್ಪಷಲಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. 2019ನೇ ಇಸವಿಯಿಂದ ಹಲಸೂರಿನ ರುಷಾಲಿ ಫರ್ಟಿಲಿಟಿ ಅಂಡ್ ಸರ್ಜರಿ ಆಸ್ಪತ್ರೆಯನ್ನು ನಾನೇ ನಡೆಸುತ್ತಿದ್ದೇನೆ. ಮಾರ್ಚ್-2024ನೇ ಇಸವಿಯಲ್ಲಿ ಇ.ವಿ.ಎಫ್ ಲ್ಯಾಬ್ ಮತ್ತು ಆಪರೇಷನ್ ಥಿಯೇಟರ್ ಪ್ರಾರಂಭಿಸುವ ಸಲುವಾಗಿ ನನ್ನ ಸಹೊದ್ಯೋಗಿಗಳಿಂದ ಮಾಹಿತಿಯನ್ನು ಪಡೆಯುತ್ತಿದ್ದಾಗ ಎಂಬ್ರಾಜಿಲಿಯಸ್ಟ್ ಅಕೀಲ್ ಚಂದ್ರಶೇಖರ್ ರವರಿಗೆ ಆಸ್ತ್ ಮೆಡಿ ಟೆಕ್ ಪ್ರೈ. ಲಿ. ನ ಆರೋಪಿಯೊಂದಿಗೆ ಪರಿಚಯವಿರುವುದಾಗಿ ಹೇಳಿ ನನಗೆ ಆರೋಪಿಯ ಫೋನ್ ನಂಬರ್ ಕೊಟ್ಟಿರುತ್ತಾರೆ. ನಾನು ಆರೋಪಿಗೆ ಫೋನ್ ಮಾಡಿದ ನಂತರ ಆರೋಪಿ ನಮ್ಮ ಆಸ್ಪತ್ರೆಗೆ ಬಂದು ಸೈಟ್ ವಿಸಿಟ್ ಮಾಡಿ ಕೊಟೇಷನ್ ಕೊಟ್ಟಿದ್ದರು. ರೂ.62 ಲಕ್ಷಕ್ಕೆ ಇ.ವಿ.ಎಫ್ ಲ್ಯಾಬ್ ಮತ್ತು ಆಪರೇಷನ್ ಥಿಯೇಟರ್ ಮಾಡಿಕೊಡುವುದಾಗಿ ನಮ್ಮ ನಡುವೆ ಮಾತುಕತೆ ಆಯಿತು. ಆರೋಪಿ ಆ ಸಮಯದಲ್ಲಿ ರೂ.10 ಲಕ್ಷ ಮುಂಗಡ ಹಣ ನೀಡುವಂತೆ ಆರೋಪಿ ತಿಳಿಸಿದರು. ಬಾಕಿ ಹಣವನ್ನು ಇಕ್ಯೂಪ್‌ಮೆಂಟ್ ಹಾಗೂ

ಮೆಟರೀಯಲ್ ಖರೀದಿ ಸಮಯದಲ್ಲಿ ಕೊಡಬೇಕೆಂದು ತಿಳಿಸಿದರು. ನಾನು ಆರೋಪಿಗೆ ರೂ.10 ಲಕ್ಷ ಹಣ ಕೊಟ್ಟಾಗ ಆತ ನನಗೆ ರೂ.10 ಲಕ್ಷದ ವೋಚರ್ ಕೊಟ್ಟಿದ್ದರು. ಕೆಲಸ ಪ್ರಾರಂಭಿಸಿದ 90 ದಿನಗಳೊಳಗೆ ಮುಗಿಸಿಕೊಡುವುದಾಗಿ ಭರವಸೆ ನೀಡಿದರು.

29-ಮಾರ್ಚ್-2024 ರಲ್ಲಿ ಆರೋಪಿ ಕರೆ ಮಾಡಿ 01.04.2024 ರಿಂದ ಶೇ.4 ರಷ್ಟು ಇನ್ಸ್ಟ್ರುಮೆಂಟ್ ರೇಟ್ ಜಾಸ್ತಿ ಆಗುತ್ತದೆ ಎಂದು ಹೇಳಿದರು. ಅದಕ್ಕಾಗಿ ದಿಃ29.03.2024 ಕ್ಕೆ ಆರ್ಡರ್ ಕೊಟ್ಟು ರೂ.15 ಲಕ್ಷ ಹಣ ಕೊಡಿ ಹಾಗೂ ಅದಾದ ಒಂದು ತಿಂಗಳೊಳಗೆ ರೂ.20 ಲಕ್ಷ ಕೊಡಿ ಎಂದು ಆರೋಪಿ ಹೇಳಿದರು. 2024ನೇ ಮಾರ್ಚ್ ಕೊನೆಯಲ್ಲಿ ರೂ.15 ಲಕ್ಷದಲ್ಲಿ 14 ಲಕ್ಷದ 86 ಸಾವಿರದ 500 ರೂಗಳನ್ನು ಹಾಗೂ 2024ನೇ ಏಪ್ರಿಲ್ ಕೊನೆಯಲ್ಲ 20 ಲಕ್ಷದ 500 ರೂಗಳನ್ನು ಪಾವತಿ ಮಾಡಿದೆನು. ಆ ನಂತರ ಆರೋಪಿ ಬಂದಿಲ್ಲ. ಲಿಖಿತ ಕರಾರು ಪತ್ರ ಮಾಡಿ ಕೇರಳದಿಂದ ಕಾಪಿ ಕಳುಹಿಸುತ್ತೇನೆ ಎಂದು ಹೇಳಿದರು. ಆದರೆ, ಆರೋಪಿ ಲಿಖಿತ ಕರಾರಿನ ಪ್ರತಿ ಕಳುಹಿಸಿಲ್ಲ. ಮಾರ್ಚ್ ಕೊನೆಯಲ್ಲಿ ಆರ್ಡರ್ ಕೊಟ್ಟಿರುವುದರಿಂದ ದಿಃ10.05.2024 ರ ಒಳಗಾಗಿ ಆಪರೇಷನ್ ಥಿಯೇಟರ್ ಅನ್ನು ಹ್ಯಾಂಡ್ ಒವರ್ ಮಾಡುತ್ತೇನೆ ಎಂದು ಹೇಳಿದರು. ತಪ್ಪಿದಲ್ಲಿ ಪ್ರತಿ ದಿನ ರೂ.1500/- ದಂಡ ಕೊಡುವುದಾಗಿ ಬರೆದುಕೊಟ್ಟಿರುತ್ತಾರೆ. ಆ ನಂತರ ಆರೋಪಿ ಬಂದಿರುವುದಿಲ್ಲ. ಸಿವಿಲ್ ವರ್ಕ್ ಮಾಡುವುದನ್ನು ಕೂಡ ನಿಲ್ಲಿಸಿದರು.

ಮುಂದುವರೆದ ಪ್ರಮಾಣೀಕೃತ ಹೇಳಿಕೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ನೀಡಿದ ಹೇಳಿಕೆಯನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**